ಅನುಬಂಧ–ಬಿ

ಬೀಡಿ ಕಂಪನಿಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ವಿವರಗಳು

ಕ್ರ.ಸಂ.	ಜಿಲ್ಲೆ	ಕಾರ್ಮಿಕರ ಸಂಖ್ಯೆ
1.	ಬೆಂಗಳೂರು	200
2.	ಮೈಸೂರು	393
3.	ಮಂಡ್ಯ	6
4.	ಶಿವಮೊಗ್ಗ	40
5.	ಕೋಲಾರ	110
6.	ತುಮಕೂರು	391
7.	ಹಾಸನ	199
8.	ಮಂಗಳೂರು	1599
9.	ಉಡುಪಿ	292
10.	ಹುಬ್ಬಳ್ಳಿ	37
11.	ಬಳ್ಳಾರಿ	86
12.	ದಾವಣಗೆರೆ	30
13.	ಗುಲ್ಬರ್ಗಾ	52
14.	ಬಿಜಾಪುರ	4
15.	ಬೆಳಗಾಂ	118
16.	ಹಾವೇರಿ	62
17.	ಗದಗ	7
18.	ಕೊಪ್ಪಳ	13
19.	ಬಾಗಲಕೋಟೆ	13
20.	ಚಾಮರಾಜನಗರ	87
	ಒಟ್ಟು	**3939**

ಶಿವಮೊಗ್ಗ ನಗರದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನಗಳ ಬಗ್ಗೆ

19(08) : ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ನಿರ್ಮಿಸುತ್ತಿರುವ ಅಂಬೇಡ್ಕರ್ ಭವನಕ್ಕೆ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ;

ಆ) ಅದನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಹಣ ಬೇಕಾಗುತ್ತದೆ; ಹಾಗೂ ಎಷ್ಟು ದಿನದಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರೂ. 59.00 ಲಕ್ಷಗಳು.

ಆ) ಈ ಕಾರ್ಯಕ್ರಮದ ಅಂದಾಜು ವೆಚ್ಚ ರೂ. 99.50 ಲಕ್ಷ ಸಮಾಜ ಕಲ್ಯಾಣ ಇಲಾಖೆಯು ಹೊರಡಿಸಿದ ಸರ್ಕಾರಿ ಆದೇಶದಂತೆ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ನಿರ್ಮಿಸುವ ಪ್ರತಿ ಭವನಕ್ಕೆ ನಿಗದಿಪಡಿಸಿದ ಅಂದಾಜು ಮೊತ್ತ 40.00

ಲಕ್ಷಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ. 10.00 ಲಕ್ಷಗಳನ್ನು ನಿರ್ಮಾಣದ ಸಲುವಾಗಿ ಇಲಾಖಾ ವತಿಯಿಂದ ನೀಡಬೇಕಾಗಿರುತ್ತದೆ. ಅದರಂತೆ ರೂ.5.00 ಲಕ್ಷಗಳನ್ನು ಬಿಡುಗಡೆಗೊಳಿಸಿದೆ. ಉಳಿದ ರೂ. 5.00 ಲಕ್ಷಗಳನ್ನು ಬಿಡುಗಡೆಗೊಳಿಸಲು ಪರಿಶೀಲಿಸಲಾಗುತ್ತಿದೆ. ಮತ್ತೆ ಹೆಚ್ಚುವರಿ ಮೊತ್ತವನ್ನು ಸ್ಥಳೀಯ ಸಂಸ್ಥೆಗಳಿಂದ ಭರಿಸತಕ್ಕದ್ದು.

ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಪ್ರಕರಣಗಳ ಬಗ್ಗೆ

76 (290) : ಶ್ರೀ ರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಪ್ರಕರಣಗಳ ಸಂಖ್ಯೆ ಎಷ್ಟು;

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ದಿನಾಂಕ 1-6-2004ರ ಅಂತ್ಯಕ್ಕೆ ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ 10,65,366 ಪ್ರಕರಣಗಳು ಬಾಕಿ ಇವೆ.

ಸಿವಿಲ್ ಪ್ರಕರಣಗಳು	–	6,11,326
ಕ್ರಿಮಿನಲ್ ಪ್ರಕರಣಗಳು	–	4,54,040

168 (362) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ ವಿಧಾನ ಸಭಾ ಕ್ಷೇತ್ರ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಾದ್ಯಂತ ಮುಚ್ಚಲ್ಪಟ್ಟ ಕಾರ್ಖಾನೆಗಳು ಯಾವುವು;

ಆ) ಸದರಿ ಕಾರ್ಖಾನೆಗಳು ಮುಚ್ಚಲ್ಪಡಲು ಕಾರಣಗಳೇನು;

ಇ) ಈ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದರಿಂದ ಬೀದಿಪಾಲಾದ ಕಾರ್ಮಿಕರ ಸಂಖ್ಯೆ ಎಷ್ಟು;

ಈ) ಸದರಿ ಕಾರ್ಮಿಕರುಗಳಿಗೆ ಕಾರ್ಖಾನೆಗಳ ವತಿಯಿಂದ ನೀಡಬೇಕಾದ ಹಣದ ಮೊತ್ತ ಎಷ್ಟು; ಹಾಗೂ ಈವರೆಗೆ ಎಷ್ಟು ಮಂದಿಗೆ ಬಾಕಿ ಹಣ ನೀಡಲಾಗಿದೆ; ಕಾರ್ಖಾನೆವಾರು ವಿವರಗಳನ್ನು ಒದಗಿಸುವುದು

ಉ) ಸದರಿ ಬಾಕಿ ಮೊತ್ತವನ್ನು ಪಾವತಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಮೈಸೂರು ಜಿಲ್ಲೆಯಾದ್ಯಂತ ಒಟ್ಟು ಮುಚ್ಚಿರುವ ಘಟಕಗಳು-70 ಪಟ್ಟಿ ಲಗತ್ತಿಸಲಾಗಿದೆ.